# ಉಪ ತಹಶೀಲ್ದಾರರು, ನಾಡ ಕಾರ್ಯಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| 1)ಸುಣಗಾರ ಕೊಟ್ರಮ್ಮ ಗಂಡ ದಿ//ಸುಣಗಾರ ಪಕ್ಕೀರಪ್ಪ,<br>2)ಬಸವರಾಜಪ್ಪ ಎಸ್. ತಂದೆ ಸುಣಗಾರ ಮಲ್ಲಪ್ಪ,<br>ಹುಗಲೂರು ಗ್ರಾಮ, ಹಡಗಲಿ ತಾ.<br>{ಶ್ರೀ ಸುಧಾಕರ್ ಸಿ.ಎಸ್., ಶ್ರೀಮತಿ ಅಂಭುಜ ಎಸ್., ವಕೀಲರು, ಹಡಗಲಿ } | ಎಸ್.ಗಾಯತ್ರಿ ಗಂಡ್ ಲೇಟ್ ಮಂಜುನಾಥ,<br>ಹುಗಲೂರು ಗ್ರಾಮ, ಹಡಗಲಿ ತಾ.<br>{ಶ್ರೀ ಎಲ್.ಹಾಲೇಶ್ ನಾಯ್ಕ, ವಕೀಲರು, ಹಡಗಲಿ} |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ಗ್ರಾಮದ ಹೆಸರು | ಸರ್ವೆ ನಂಬರ್ | ವಿಸ್ತೀರ್ಣ | ತರಹೆ |
|---|---|---|---|---|
| 1. | ಹುಗುಲೂರು | 315/ಎ/2 | 2–21 | ಖುಷ್ಕಿ |

**ಪೀಠಿಕೆ:–**

1)ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲೂಕಿನ ಹುಗುಲೂರು ಗ್ರಾಮದ ಸ.ನಂ.315/ಎ/2 ವಿ:2–21 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಹುಗುಲೂರು ಗ್ರಾಮ ವಾಸಿಯಾದ ಶ್ರೀಮತಿ ಸುಣಗಾರ ಕೊಟ್ರಮ್ಮ ಗಂಡ ದಿ//ಸುಣಗಾರ ಪಕ್ಕೀರಪ್ಪ ಇವರು ಹುಗುಲೂರು ಗ್ರಾಮ ವಾಸಿಯಾದ ಬಸವರಾಜಪ್ಪ ಎಸ್. ತಂದೆ ಮಲ್ಲಪ್ಪ ಇವರಿಗೆ ನೋಂದಾಯಿತ ದಸ್ತಾವೇಜು ಸಂ.1266/15–16 ದಿ:03–07–2015 ರಂದು ಸ್ಥಿರಾಸ್ತಿಯ ದಾನಪತ್ರದ ಮೂಲಕ ನೀಡಿರುತ್ತಾರೆ ಎಂದು ಉಪ ನೋಂದಣಾಧಿಕಾರಿ, ಹೂವಿನಹಡಗಲಿ ರವರು ವರದಿ ಮಾಡಿರುತ್ತಾರೆ. ಗ್ರಾಮದಲ್ಲಿ ನಮೂನೆ 21 ರ ನೋಟಿಸನ್ನು ದಿನಾಂಕ:13–07–2015 ರಂದು ಜಾರಿ ಮಾಡಲಾಗಿ ನಿಗದಿತ ಅವಧಿಯೊಳಗೆ ಅಂದರೆ ದಿ:28–07–2015 ರಂದು ಹುಗುಲೂರು ಗ್ರಾಮದ ನಿವಾಸಿಯಾದ ಎಸ್.ಗಾಯತ್ರಿ ಗಂಡ ಮಂಜುನಾಥ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು, ಇಟ್ಟಿಗಿರವರು M.NO.3/2015-16 ರ ಕಡತವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ವಿಚಾರಣೆ ದಿನಾಂಕ 20–01–2016 ರಂದು ಹಾಜರಾಗಲು ನೋಟೀಸ್ ನೀಡಲಾಯಿತು.

2)ಅರ್ಜಿದಾರರು ಮತ್ತು ತಕರಾರುದಾರು ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ಅರ್ಜಿದಾರರ ಪರ ವಕೀಲರು ಹಾಜರಾಗಿ ಲಿಖಿತ ವಾದಪತ್ರ, ನೋಂದಾಯಿತ ದಾನಪತ್ರದ ಪ್ರತಿ, ಅದರ ಇ.ಸಿ. ಪ್ರತಿ, ಕಂಪ್ಯೂಟರ್ ಪಹಣಿ ಸಲ್ಲಿಸಿರುತ್ತಾರೆ. ಅರ್ಜಿದಾರರ ಪರ ವಕೀಲರು ಅರ್ಜಿದಾರರು ಮೊಮ್ಮಗನ ಹೆಸರಿಗೆ ನೋಂದಾಯಿತ ದಾನಪತ್ರದ ಮೂಲಕ ಆಸ್ತಿಯನ್ನು ನೀಡಿದ್ದು, ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ. ತಕರಾರುದಾರರು ಹಾಜರಾಗಿ ಅಫಿಡೆವಿಟ್ ಪ್ರತಿ, ತಕರಾರುದಾರರು ತಾವೇ ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿದ ವಂಶವೃಕ್ಷದ ಪ್ರತಿ, ಚುನಾವಣೆ ಗುರುತಿನ ಚೀಟಿ ಪ್ರತಿ, ಕಂಪ್ಯೂಟರ್ ಪಹಣಿ ಪ್ರತಿ ಸಲ್ಲಿಸಿರುತ್ತಾರೆ. ತಕರಾರುದಾರ ಪರ ವಕೀಲರು ಲಿಖಿತ ತಕರಾರು, ಮರಣ ಪ್ರಮಾಣಪತ್ರದ ಪ್ರತಿ, ಭರತಕುಮಾರನ ಜನನ ಪ್ರಮಾಣ ಪತ್ರದ ಪ್ರತಿ, ಭರತಕುಮಾರ ಮತ್ತು ಗಾಯತ್ರಿ ಇವರ ಪೋಟೊ ಪ್ರತಿಯ ಜಿರಾಕ್ಸ್ ಪ್ರತಿ, ಸ್ವಯಂ ದೃಢೀಕೃತ ವಂಶವೃಕ್ಷ ಪ್ರತಿ, ಚುನಾವಣೆ ಗುರುತಿನ ಚೀಟಿ ಪ್ರತಿ, ತಾಯಿ ಕಾರ್ಡ್‌ನ ಪ್ರತಿಯನ್ನು ಸಲ್ಲಿಸಿದರು. ತಕರಾರುದಾರರ ಪರ ವಕೀಲರು ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿದ್ದು, ಸದರಿ ಪ್ರಕರಣವು ಸಿವಿಲ್ ಅಂಶದಿಂದ ಕೂಡಿದ್ದು ಸಿವಿಲ್ ನ್ಯಾಯಾಲಯಕ್ಕೆ ಹೋಗಲು ಆದೇಶ ಮಾಡಲು ಹಾಗೂ ಹಕ್ಕು ಬದಲಾವಣೆ ಮಾಡದಿರಲು ಕೋರಿದರು.

3)ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ದಾಖಲೆಗಳು ಮತ್ತು ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಹಾಲಿ ಪಹಣಿಯು ಸುಣಗಾರ ಕೊಟ್ರಮ್ಮ ಗಂಡ ದಿ. ಪಕ್ಕೀರಪ್ಪ ಇವರ ಹೆಸರಿಗೆ ನಮೂದು ಇರುತ್ತದೆ. ಅರ್ಜಿದಾರರು ನೋಂದಣಿ ಮಾಡುವ ವೇಳೆಯಲ್ಲಿ ಸಲ್ಲಿಸಿದ ದಾಖಲೆಗಳಲ್ಲಿ ನೋಂದಾಯಿತ ಸ್ಥಿರಾಸ್ತಿಯ ದಾನಪತ್ರ ಮತ್ತು ವಂಶವೃಕ್ಷ ಅಫಿಡೆವಿಟ್ ಇರುತ್ತವೆ. ವಂಶವೃಕ್ಷ ಪ್ರಕಾರ ಸುಣಗಾರ ಪಕ್ಕೀರಪ್ಪ(ಪೋತಿ) ಮತ್ತು ಸುಣಗಾರ ಕೊಟ್ರಮ್ಮ ಇವರಿಗೆ ಸುಣಗಾರ ಮಲ್ಲಪ್ಪನು ಮಗನಿದ್ದು, ಸುಣಗಾರ ಮಲ್ಲಪ್ಪ ಮತ್ತು ಸುಣಗಾರ ಅನುಸೂಯಮ್ಮ(ಪೋತಿ) ಇವರಿಗೆ 1)ಸುಣಗಾರ ಮಂಜುನಾಥ, 2)ಸುಣಗಾರ ಬಸವರಾಜ ಮತ್ತು 3)ರೇಖಾ ಇವರು ಮಕ್ಕಳಾಗಿರುತ್ತಾರೆ. ಸುಣಗಾರ ಕೊಟ್ರಮ್ಮ ಗಂಡ ದಿ//ಸುಣಗಾರ ಪಕ್ಕೀರಪ್ಪ ಇವರು ಮೊಮ್ಮಗನಾದ ಸುಣಗಾರ ಬಸವರಾಜ ಇವರಿಗೆ ನೋಂದಾಯಿತ ದಾನಪತ್ರದ ಮೂಲಕ ನೀಡಿರುತ್ತಾರೆ. ತಕರಾರುದಾರರು ಸಲ್ಲಿಸಿದ ತಕರಾರಿನೊಂದಿಗೆ ವಂಶವೃಕ್ಷ ಅಫಿಡೆವಿಟ ಮತ್ತು ಕಂಪ್ಯುಟರ್ ಪಹಣಿ ಸಲ್ಲಿಸಿರುತ್ತಾರೆ. ತಕರಾರುದಾರರು ನೀಡಿದ ವಂಶವೃಕ್ಷ ಪ್ರಕಾರ ಬಾರಿಕರ ಉರ್ಫ ಸುಣಗಾರ ಸಣ್ಣ ಪಕ್ಕೀರಪ್ಪ ಮತ್ತು ಬಾರಿಕರ ಉರ್ಫ ಸುಣಗಾರ ಕೊಟ್ರಮ್ಮ ಇವರಿಗೆ 1)ಎಸ್.ಮಲ್ಲಪ್ಪ ಮತ್ತು 2)ಎಸ್.ನೀಲಮ್ಮ ಇವರು ಮಕ್ಕಳಾಗಿರುತ್ತಾರೆ. ಎಸ್.ಮಲ್ಲಪ್ಪ ಇವರಿಗೆ 1)ಎಸ್.ಮಂಜುನಾಥ(ಪೋತಿ), 2)ಬಸವರಾಜ ಮತ್ತು 3)ರೇಖಾ ಇವರು ಮಕ್ಕಳಾಗಿತ್ತಾರೆ. ತಕರಾರುದಾರರು ಎಸ್.ಮಂಜುನಾಥ ಇವರ ಪತ್ನಿಯಾಗಿರುತ್ತಾರೆ.

4)ಅರ್ಜಿದಾರರ ಪರ ವಕೀಲರು ನೀಡಿದ ಲಿಖಿತ ವಾದಪತ್ರದಲ್ಲಿ ಸದರಿ ಮೇಲ್ಕಂಡ ಜಮೀನು 1ನೇ ಅರ್ಜಿದಾರರಾದ ಸುಣಗಾರ ಕೊಟ್ರಮ್ಮ ಇವರ ಗಂಡ ಪಕ್ಕೀರಪ್ಪ ಗಳಿಸಿದ ಆಸ್ತಿಯಾಗಿದ್ದು, ಪಕ್ಕೀರಪ್ಪನು ತೀರಿಕೊಂಡ ನಂತರ ಪೋತಿ ವಾರಸಾ ಪ್ರಕಾರ 1ನೇ ಅರ್ಜಿದಾರಳ ಹೆಸರಿಗೆ ಬದಲಾವಣೆಯಾಗಿದ್ದು, ಅದು ತನ್ನ ಸ್ವಂತ ಆಸ್ತಿ ಆಗಿರುತ್ತದೆ. ಸದರಿ ಆಸ್ತಿಯು 1ನೇ ಅರ್ಜಿದಾರಳ ಸ್ವಾಧೀನ ಅನುಭವದಲ್ಲಿದ್ದು, ಪಹಣಿ ಪತ್ರಿಕೆಯಲ್ಲಿ ಆಕೆಯ ಹೆಸರಿನಲ್ಲಿರುತ್ತದೆ. ಸದರಿ ಆಸ್ತಿಯು ಆಕೆಯ ಗಂಡನ ಸ್ವಯಾರ್ಜಿತ ಆಸ್ತಿಯಾಗಿದ್ದು, ತನ್ನ ಇಷ್ಟಾನುಸಾರ ಪರಭಾರೆ ಮಾಡುವ ಹಕ್ಕು ಆಕೆಗೆ ಇದೆ. 1ನೇ ಅರ್ಜಿದಾರಳಿಗೆ ಸುಮಾರು 66 ವರ್ಷ ವಯಸ್ಸಾಗಿದ್ದು, ತನ್ನ ಪಾಲನೆ ಪೋಷಣೆಯನ್ನು ತಾನೇ ಮಾಡಿಕೊಳ್ಳಲು ಆಗದಿರುವುದರಿಂದ ತನ್ನ ಮಗನ ಮಗ 2ನೇ ಅರ್ಜಿದಾರ ಬಸವರಾಜನು ಆಕೆಯನ್ನು ಸಂರಕ್ಷಣೆ ಪಾಲೆ ಪೋಷಣೆ ಮಾಡುತ್ತಿರುವುದರಿಂದ ಆತನ ಮೇಲಿನ ಪ್ರೀತಿಯಿಂದ ಹಾಗೂ ತನ್ನನ್ನು ಮುಂದೆ ಸಾಯುವವರೆಗೂ ಸಂರಕ್ಷಣೆ ಮಾಡುತ್ತಾನೆಂಬ ಭರವಸೆ ಇರುವುದರಿಂದ ತನ್ನ ಸ್ವಂತ ಆಸ್ತಿಯನ್ನು ಬಸವರಾಜನ ಹೆಸರಿಗೆ ದಿ:3–7–2015 ರಂದು ದಾನಪತ್ರವನ್ನು ಬರೆಯಿಸಿ ಅಂದೇ ನೋಂದಣಿ ಮಾಡಿಸಿ ಕೊಟ್ಟಿರುತ್ತೇನೆ. ಸದ್ರಿ ದಾನಪತ್ರದ ಪ್ರಕಾರ ಈಗ ಹಕ್ಕು ಬದಲಾವಣೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿದ್ದು, ಅದು ಊರ್ಜಿತವಾಗಿರುತ್ತದೆ. ಆಕೆಗೆ ತನ್ನ ಆಸ್ತಿಯನ್ನು ಯಾವುದೇ ರೀತಿಯಿಂದ ಬರೆದುಕೊಡುವ ಸಂಪೂರ್ಣ ಹಕ್ಕು ಇರುತ್ತದೆ. ಮೇಲಿನ ವಿವಾದಿತ ಆಸ್ತಿಯಲ್ಲಿ ಪ್ರತಿವಾದಿಗೆ ಯಾವುದೇ ರೀತಿಯ ಹಕ್ಕು ಬಾದ್ಯತೆ ಇರುವುದಿಲ್ಲ ಹಾಗೂ ಯಾವುದೇ ತಕರಾರು ಸಲ್ಲಿಸಲು ಬಾದ್ಯವಿರುವುದಿಲ್ಲ. ತಕರಾರುದಾರಳು

ಅರ್ಜಿದಾರರಿಗೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ಹೀಗಿದ್ದು ಅರ್ಜಿದಾರರಿಗೆ ತೊಂದರೆ ಕೊಡಬೇಕೆನ್ನುವ ಒಂದೇ ಉದ್ದೇಶದಿಂದ ತಕರಾರು ಸಲ್ಲಿಸಿದ್ದು, ಅದನ್ನು ಪರಿಗಣಿಸದೇ ರಿಜಿಸ್ಟರ್ ದಾನಪತ್ರದ ಆಧಾರದ ಮೇಲೆ 2ನೇ ಅರ್ಜಿದಾರನ ಹೆಸರಿಗೆ ಹಕ್ಕು ಬದಸಲಾವಣೆ ಮಾಡಲು ಆದೇಶ ಮಾಡಬೇಕೆಂದು, ಅರ್ಜಿದಾರರು ಸಲ್ಲಿಸಿರುವ ದಾನಪತ್ರವು ನೊಂದಣಿ ಆಗಿದ್ದು, ಅದನ್ನು ಪ್ರಶ್ನಿಸುವ ಹಕ್ಕು ಸಿವಿಲ್ ನ್ಯಾಯಾಲಯಕ್ಕೆ ಇದ್ದು, ತಮ್ಮ ಕಛೇರಿ ವ್ಯಾಪ್ತಿಗೆ ಬರುವುದಿಲ್ಲ. ಕಾರಣ ತಕರಾರುದಾರರಿಗೆ ಯಾವುದೇ ಹಕ್ಕು ಇದ್ದಲ್ಲಿ ಅದನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲು ಸೂಚಿಸಿ ಕಾನೂನು ಪ್ರಕಾರ ನೋಂದಣಿ ದಾನಪತ್ರದ ಪ್ರಕಾರ ಮೇಲಿನ ಆಸ್ತಿಯನ್ನು ಹಕ್ಕು ಬದಲಾವಣೆ ಮಾಡಲು ಆದೇಶ ನೀಡಬೇಕೆಂದು ಪ್ರಾರ್ಥಿಸಿರುತ್ತಾರೆ.

5)ತಕರಾರುದಾರರ ಪರ ವಕೀಲರು ಸಲ್ಲಿಸಿದ ಲಿಖಿತ ತಕರಾರಿನಲ್ಲಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಕಾನೂನು ಬಾಹಿರವಾಗಿದ್ದು ಮತ್ತು ವಾಸ್ತವ ಸಂಗತಿಯನ್ನು ಮರೆಮಾಚಿ ದಾಖಲೆಗಳನ್ನು ಸೃಷ್ಠಿ ಮಾಡಿ ಖಾತೆ ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಶ್ರೀಮತಿ ಸುಣಗಾರ ಕೊಟ್ರಮ್ಮ ಗಂಡ ಪಕ್ಕೀರಪ್ಪ ಈಕೆಗೆ ಸದರಿ ಆಸ್ತಿಯನ್ನು ಪರಭಾರೆ ಮಾಡುವ, ಹಸ್ತಾಂತರ ಮಾಡುವ ಮತ್ತು ಮಾರಾಟ ಮಾಡುವ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ ಮತ್ತು ಈಕೆಯ ಸ್ವಯಾರ್ಜಿತ ಆಸ್ತಿಯಾಗಿರುವುದಿಲ್ಲ. ಸದರಿ ಆಸ್ತಿಯು ಮೂಲತ ಹಿರಿಯರ ಆಸ್ತಿಯಾಗಿರುತ್ತದೆ. ಮತ್ತು ಪಕ್ಕೀರಪ್ಪ ಮತ್ತು ಕೊಟ್ರಮ್ಮ ಇವರಿಗೆ ಸುಣಗಾರ ಮಲ್ಲಪ್ಪ ಎಂಬ ಮಗನಿದ್ದು, ಈತನಿಗೆ ಇಬ್ಬರು ಗಂಡು ಮಕ್ಕಳು-ಸುಣಗಾರ ಮಂಜುನಾಥ ಮತ್ತು ಸುಣಗಾರ ಬಸವರಾಜ. ಸುಣಗಾರ ಮಂಜುನಾಥ ಉರ್ಫ್ ಮಂಜಪ್ಪ ಈತನ ವಿವಾಹವು ತಕರಾರುದಾರರ ಸಂಗಡ ಆಗಿದ್ದು, ಅವರ ವೈವಾಹಿಕ ಜೀವನದ ಫಲವಾಗಿ ಭರತಕುಮಾರ ಎಂಬ ಮಗನು ಜನಿಸಿರುತ್ತಾನೆ. ಸುಣಗಾರ ಮಂಜುನಾಥನು ದಿ:12-7-2012 ರಂದು ಮರಣ ಹೊಂದಿರುತ್ತಾನೆ. ಸದರಿ ಆಸ್ತಿಯು ಹಿರಿಯರ ಆಸ್ತಿ ಇರುವುದರಿಂದ ಸುಣಗಾರ ಕೊಟ್ರಮ್ಮ, ಸುಣಗಾರ ಮಲ್ಲಪ್ಪ, ಸುಣಗಾರ ಬಸವರಾಜ ಮತ್ತು ಸುಣಗಾರ ಗಾಯತ್ರಿ @ ಕವಿತ ಮತ್ತು ಭರತಕುಮಾರ ಇವರಿಗೆ ಸದರಿ ಅಸ್ತಿಯ ಮೇಲೆ ಸಮನಾದ ಹಿಸ್ಸೆ, ಹಕ್ಕು ಮತ್ತು ಹಿತಾಸಕ್ತಿ ಇರುತ್ತದೆ. ವಾಸ್ತವ ಸಂಗತಿ ಈ ಮೇಲಿನಂತೆ ಇದ್ದರೂ ಕೂಡ ತಕರಾರುದಾರಳಿಗೆ ಮತ್ತು ಆಕೆಯ ಮಗ ಭರತಕುಮಾರ ಈತನಿಗೆ ದಕ್ಕಬಾರದು ಎನ್ನುವ ದುರುದ್ದೇಶದಿಂದ ಮತ್ತು ಸದರಿ ಆಸ್ತಿಯ ಮೇಲಿನ ಅವರ ಹಕ್ಕನ್ನು ಕಸಿದುಕೊಳ್ಳುವ ಉದ್ದೇಶದಿಂದ ಸದರಿ ಅರ್ಜಿಯನ್ನು ದಾಖಲೆಗಳನ್ನು ಸೃಷ್ಠಿ ಮಾಡಿ ಮತ್ತು ನ್ಯಾಯಾಲಯ ಕಣ್ಣಿಗೆ ಮಣ್ಣೆರುಚುವ ಉದ್ದೇಶದಿಂದ ಈ ರೀತಿ ಮಾಡಿರುವುದು ಇರುತ್ತದೆ. ಹಾಗೂ ಅರ್ಜಿದಾರಳ ಮತ್ತು ತಕರಾರುದಾರರು ಹಕ್ಕನ್ನು ಸದರಿ ಆಸ್ತಿಯ ಮೇಲೆ ನಿರ್ಣಯ ಮಾಡಬೇಕಾಗಿರುವುದರಿಂದ ಮತ್ತು ಘನ ನ್ಯಾಯಾಲಯಕ್ಕೆ ಸದರಿ ಆಸ್ತಿಯ ಮೇಲೆ ಹಕ್ಕನ್ನು ನಿರ್ಣಯ ಮಾಡಲು ಅಧಿಕಾರ ಇರದೇ ಇರುವುದರಿಂದ ಅರ್ಜಿದಾರರ ಅರ್ಜಿಯನ್ನು ತಿರಸ್ಕಾರ ಮಾಡಬೇಕೆಂದು ಮತ್ತು ಸಿವಿಲ್ ನ್ಯಾಯಾಲಯದಲ್ಲಿ ಸದರಿ ಆಸ್ತಿಯ ಸಂಬಂಧ ತಮ್ಮ ಹಕ್ಕನ್ನು ನಿರ್ಣಯಿಸಿಕೊಳ್ಳಲು ನಿರ್ದೇಶನ ನೀಡುವಂತೆ ಪ್ರಾರ್ಥಿಸಿರುತ್ತಾರೆ.

6)ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಅರ್ಜಿದಾರ-1 ರವರಿಗೆ ಸದರಿ ಜಮೀನು ಅವರ ಗಂಡನಿಂದ ಬಂದಿರುತ್ತದೆ. ಸದರಿ ಪ್ರಕರಣದಲ್ಲಿ ಅರ್ಜಿದಾರ-1 ರವರು ಅರ್ಜಿದಾರ-2 ರವರಿಗೆ ನೋಂದಾಯಿತ ದಾನಪತ್ರದ ಮೂಲಕ ನೀಡಿರುತ್ತಾರೆ. ಸದರಿ ಆಸ್ತಿಯು ಅರ್ಜಿದಾರ-1 ರವರ ಗಂಡನಿಂದ ಆಕೆಗೆ ಬಂದಿರುವುದರಿಂದ ಸದರಿ ಆಸ್ತಿಯನ್ನು ಆಕೆಯು ವಾರಸಾ ಪ್ರಕಾರ ಪಡೆದಿರುವುದು ಕಂಡು ಬರುತ್ತದೆ. ಇದರಿಂದ ಸದರಿ ಆಸ್ತಿಯು ಅರ್ಜಿದಾರರ ಸ್ವಯಾರ್ಜಿತ ಆಸ್ತಿಯಾಗಿರದೇ ಗಂಡನಿಂದ ಬಂದ ವಾರಸತ್ವ ಆಸ್ತಿಯಾಗಿರುತ್ತದೆ. ಅರ್ಜಿದಾರ-1 ರವರಿಗೆ 1)ಎಸ್.ಮಲ್ಲಪ್ಪ ಮತ್ತು 2)ಎಸ್.ನೀಲಮ್ಮ ಎಂಬ ಇಬ್ಬರು ಮಕ್ಕಳಿದ್ದು, ಅವರು ಇನ್ನು ಜೀವಂತವಾಗಿರುತ್ತಾರೆ. ಎಸ್.ಮಲ್ಲಪ್ಪನಿಗೆ 1)ಎಸ್.ಮಂಜುನಾಥ(ಪೋತಿ), 2)ಬಸವರಾಜ ಮತ್ತು 3)ರೇಖಾ ಎಂಬ ಮೂವರು ಮಕ್ಕಳು ಇರುತ್ತಾರೆ. ಕಾರಣ ಇವರೆಲ್ಲರೂ ಅರ್ಜಿದಾರ-1 ರವರಿಗೆ ನೇರವಾದ ವಾರಸುದಾರರಾಗಿರುತ್ತಾರೆ. ಹೀಗಿದ್ದು ಅರ್ಜಿದಾರ-1 ರವರು ತನ್ನ ಮಗನಿಗೆ ನೀಡದೇ ನೇರವಾಗಿ ಎರಡನೇ ಮೊಮ್ಮಗನಿಗೆ ಮಾತ್ರ ನೋಂದಾಯಿತ ದಾನಪತ್ರದ ಮೂಲಕ ನೀಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಸದರಿ ಪ್ರಕರಣದಲ್ಲಿ ತಕರಾರುದಾರರು ಅರ್ಜಿದಾರ-1 ರವರ ಮೊದಲನೇ ಮೊಮ್ಮಗ ಎಸ್.ಮಂಜುನಾಥ ರವರ ಪತ್ನಿಯಾಗಿರುತ್ತಾರೆ. ಎಸ್.ಮಂಜುನಾಥನು ದಿನಾಂಕ 12-7-2012 ರಂದು ಮರಣ ಹೊಂದಿರುತ್ತಾನೆ. ಮತ್ತು ಮಗನು ಮೈನರ್ ಇರವುದರಿಂದ ತಕರಾರುದಾರರು ತಮ್ಮ ಗಂಡನಿಗೆ ಪಾಲು ಇರುವ ಸಂಬಂಧ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ತಕರಾರುದಾರರು ತಿಳಿಸಿದಂತೆ ಅವರಿಗೆ ಹಿಸ್ಸೆಗೆ ಪಾಲುದಾರರಾಗಿದ್ದರೂ, ಸದರಿ ಪ್ರಕರಣದಲ್ಲಿ ನೋಂದಾಯಿತ ಸ್ಥಿರಾಸ್ತಿಯ ದಾನಪತ್ರದ ಬಗ್ಗೆ ನಿರ್ಣಯಿಸುವ ಅಧಿಕಾರ ಈ ನ್ಯಾಯಾಲಯದ ವ್ಯಾಪ್ತಿಗೆ ಮೀರಿದ ವಿಷಯವಾಗಿರುತ್ತದೆ. ಅಲ್ಲದೇ ಸದರಿ ವಿವಾದವು ಸಿವಿಲ್ ಅಂಶದಿಂದ ಕೂಡಿರುವುದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ನಾ.ಕಾ.ಇ/ಪಹಣಿ/ವಿವಾದ/05/2015-16 ದಿನಾಂಕ:03-08-2016

**ಆದೇಶ**

ಪೀಟೀಕೆಯಲ್ಲಿ ವಿವರಿಸಿದ ವಾಸ್ತವಾಂಶ ಮತ್ತು ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129ರ ಪ್ರಕಾರ M.NO.3/2015-16 ರ ಪ್ರಕರಣದಲ್ಲಿ ಉಭಯರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಸಾಭೀತುಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಉಪ-ತಹಶೀಲ್ದಾರರು
ನಾಡ ಕಾರ್ಯಾಲಯ, ಇಟ್ಟಿಗಿ.
ಇಟ್ಟಿಗಿ.

ಪ್ರತಿಯನ್ನು,

1. ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
2. ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಶುಧ್ಧಪ್ರತಿ ಕಡತಕ್ಕೆ.